**ಪ್ರಧಾನ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 4171/2025**

**ಫಿರ್ಯಾದುದಾರರು** : ಸೆಂಟ್ ಮಿಲ್ಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೊ-ಆಪರೇಟಿವ್ ಸೊಸೈಟಿ ಲಿ. ಕಾರವಾರ, ಮಂಕಿ ಶಾಖೆ

**- ವಿರುದ್ಧ -**

**ಆರೋಪಿತರು** ಶ್ರೀ ನಾಗೇಶ ತಂದೆ ಹನುಮಂತ ನಾಯ್ಕು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಮೇರೆಗೆ ಆರೋಪಿತನ ಹೇಳಿಕೆ**

ಪ್ರಶ್ನೆ 1 : ಈ ಪ್ರಕರಣದಲ್ಲಿನ ಪಿರ್ಯಾದಿದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರ : **Yes**

ಪ್ರಶ್ನೆ 2 ಪ್ರಾ.ಸಾ.1 ಶ್ರೀ ಅಣ್ಣಪ್ಪ ಮಂಜುನಾಥ ನಾಯ್ಕು, ಇವರು ತಮ್ಮ ಸಾಕ್ಷಿಯಲ್ಲಿ ಹೇಳಿರುವುದೆನೆಂದರೆ, ಶ್ರೀ ಮಾರುತಿ ಮಾದೇವ ನಾಯ್ಕು ರವರು ಮುಖ್ಯ ಸಾಲಗಾರರಾಗಿ ಮತ್ತು ಆರೋಪಿತನಾದ ನೀವು ಸದ್ರಿ ಸಾಲಕ್ಕೆ ಜಾಮೀನುದಾರರಾಗಿ ಪಿರ್ಯಾದಿ ಸೊಸೈಟಿಯಿಂದ ದಿನಾಂಕಃ 18-07-2019 ರಂದು ರೂ.60,000/- ವ್ಯವಹಾರ ಸಾಲವನ್ನು ಪಡೆದುಕೊಂಡಿದ್ದು ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 3 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದ್ರಿ ಸಾಲದ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಂಕಿ ಶಾಖೆ, ಚೆಕ್ ನಂಬರ್ 531594 ನ್ನು ಮೊತ್ತ ರೂ.63,837/-ಕ್ಕೆ ದಿನಾಂಕಃ 10-10-2025 ಎಂದು ನಮೂದಿಸಿ ಚೆಕ್‌ನ್ನು ಪಿರ್ಯಾದುದಾರರಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 4 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದ್ರಿ ಚೆಕ್ಕನ್ನು ಫಿರ್ಯಾದಿದಾರರು ದಿ. ಫೆಡರಲ್ ಬ್ಯಾಂಕ್ ಲಿ., ಭಟ್ಕಳ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, "Funds Insufficient" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು, ದಿನಾಂಕಃ

28-10-2025 ರಂದು ವಾಪಾಸ್ಸು ಬಂದಿರುತ್ತದೆ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 5 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚೆಕ್ ಅಮಾನ್ಯಗೊಂಡ ಕಾರಣದಿಂದ ಫಿರ್ಯಾದಿದಾರರು ದಿನಾಂಕಃ 29-10-2025 ರಂದು ತಮ್ಮ ವಕೀಲರ ಮೂಲಕ ನಿಮಗೆ ಲೀಗಲ್ ನೋಟಿಸನ್ನು ನೀಡಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕಃ 03-11-2025 ರಂದು ಜ್ಯಾರಿ ಆಗಿರುತ್ತದೆ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುತ್ತೀರಿ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 6 ನಿಮಗೆ ಹೇಳಲು ಇನ್ನೇನಾದರೂ ಇದೆಯಾ?

ಉತ್ತರ : **No**

ಪ್ರಶ್ನೆ 7 ನಿಮ್ಮ ಪರವಾಗಿ ಸಾಕ್ಷಿ ಇದೆಯಾ?

ಉತ್ತರ : **Yes**

(ಈ ಮೇಲಿನ ಆರೋಪಿಯ ಎಲ್ಲಾ ಹೇಳಿಕೆಗಳನ್ನು ನನ್ನ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿದ್ದು, ಆತ ಹೇಳಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿರುತ್ತದೆ.)

**Sd/-**

**(ಶ್ರೀಮತಿ.ದೀಪಾ ಅರಳಗುಂಡಿ)**

ಪ್ರಧಾನ ಸಿವಿಲ್ ಜಡ್ಜ ಮತ್ತು

ದಿನಾಂಕಃ 28-04-2026 ಪ್ರ. ದ. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.